ಆ) ಹಾಗಿದ್ದಲ್ಲಿ ಮೇಲ್ಕಂಡ ಯೋಜನೆಗಳನ್ನು ತೀವ್ರಗತಿಯಲ್ಲಿ ಅನುಷ್ಠಾನಕ್ಕೆ ತರುವುದಕ್ಕೋಸ್ಕರ ತಾಲ್ಲೂಕುವಾರು ಪ್ರತ್ಯೇಕ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಜನಾರೋಗ್ಯ ಶಿಲ್ಪ ಕಾರ್ಯಾಲಯಗಳನ್ನು ತೆಗೆಯುವ ವಿಚಾರ ಸರಕಾರದವರ ಗಮನಕ್ಕೆ ಬಂದಿದೆಯೇ?

ಇ) ಸವದತ್ತಿ ತಾಲ್ಲೂಕಿಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಜನಾರೋಗ್ಯ ಶಿಲ್ಪಕಾರ್ಯ ಪ್ರಾರಂಭಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು).—

ಅ) ಉಪವಿಭಾಗ ಮಟ್ಟದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ. ಜನಾರೋಗ್ಯ ಶಿಲ್ಪಕಾರ್ಯಾಲಯವಿರುವುದರಿಂದ ವಿವಿಧ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಸಾಮಾನ್ಯವಾಗಿ ವಿಳಂಬವಾಗಿರುವುದಿಲ್ಲ.

ಆ) ಇಂತಹ ಪ್ರಸ್ತಾವನೆ ಸದ್ಯದಲ್ಲಿ ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಕಾಮಗಾರಿಗಳು ನಡೆಯದೆ ಇರುವುದು

೭೬ (೩೩೬) ಶ್ರೀ ಎ. ಎಂ. ಹಿಂದುಸಗೇರಿ (ಹುಬ್ಬಳ್ಳಿ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ, ಆಹಾರ ಹಾಗೂ ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಹುಬ್ಬಳ್ಳಿ-ಧಾರವಾಡ ನಗರಸಭೆ ಪ್ರದೇಶದಲ್ಲಿ ನೀರಿನ ಕೊಳವೆಗಳ ಮತ್ತು ಜಲ ಸಂಗ್ರಹಾಗಾರಗಳ ನಿರ್ಮಾಣದ ಕೆಲಸಕ್ಕಾಗಿ ಜೀವವಿಮಾ ನಿಗಮವು ೭.೦೦ ಕೋಟಿ ರೂ.ಗಳ ಸಾಲ ಕೊಡಲು ಒಪ್ಪಿದ್ದು ನಿಜವೆ?

ಆ) ಕೆಲಸ ಕಾರ್ಯಗತ ಮಾಡಲು ಜೀವವಿಮಾ ನಿಗಮವು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ೧.೦೦ ಕೋಟಿ ರೂ. ಗಳನ್ನು ಬಿಡುಗಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಕೆಲಸ ಕಾರ್ಯಗತ ಮಾಡಲು ಪ್ರಾರಂಭ ಮಾಡಿದೆಯೆ? ಇಲ್ಲದಿದ್ದಲ್ಲಿ ಕೆಲಸ ಕೈಗೊಳ್ಳಲು ತಡವಾಗಲು ಕಾರಣವೇನು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳ ಆಹಾರ ಹಾಗೂ ನಾಗರೀಕ ಮಂತ್ರಿಗಳು).—

ಅ) ಇಲ್ಲ.

ಆ) ಬಂದಿದೆ.

ಇ) ಕೆಲಸಗಳು ಪ್ರಾರಂಭವಾಗಿವೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ, ಉತ್ತರದ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಸ್ವಾಭಾವಿಕ ನೀರಿನ ಉಗಮದ ಉಪಯೋಗದ ಬಗ್ಗೆ

೮೬ (೨೯೩ ಸಿ) ಶ್ರೀ ಬಿ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಗ್ರಾಮೀಣ ಅಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:

ಅ) ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಸಿಗುವ ಸ್ವಾಭಾವಿಕ ನೀರಿನ ಉಪಯೋಗ ಪಡೆಯಲಾಗುತ್ತಿದೆಯೆ?